**<u>ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 07-02-2024.</u>**

**<u>ಪಾಟೀ ಸವಾಲು - 3 ನೇ ಪ್ರತಿವಾದಿಯ ವಾರಸುದಾರರ ಪರ ವಕೀಲರಿಂದ :</u>**

**1)** ವಾದಿಗಳು ಮೊದಲು ಬಾಗಲೂರಿನಲ್ಲಿ ವಾಸವಿದ್ದರು. ನಾಗಪ್ಪ ಅವರ ತಂದೆಯ ಹೆಸರು ಸೊಣ್ಣಪ್ಪ. ಸೊಣ್ಣಪ್ಪ ಯಾವಾಗ ತೀರಿಹೋದರು ಎಂದರೆ ಗೊತ್ತಿಲ್ಲ. ಸದರಿ ಸೊಣ್ಣಪ್ಪ ಅವರ ಮೊದಲನೇ ಮಗ ಲಕ್ಷ್ಮಯ್ಯ. ಲಕ್ಷ್ಮಯ್ಯ ಅವರ ಕುಟುಂಬದ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ಲಕ್ಷ್ಮಯ್ಯ ಅವರು ಯಾವ ವರ್ಷದಲ್ಲಿ ಹೊಸಹಳ್ಳಿ ಬಿಟ್ಟು ಬಾಗಲೂರಿಗೆ ಬಂದರು ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಯ್ಯ ಅವರು ಬಾಗಲೂರಿಗೆ ಬರುವಾಗ ಅಲ್ಲಿ ಅವರಿಗೆ ಆಸ್ತಿಗಳು ಇತ್ತೋ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಯ್ಯ ಅವರು ಬಾಗಲೂರಿಗೆ ಬಂದಾಗ ನಾನು ಹುಟ್ಟಿರಲಿಲ್ಲ. 7 ನೇ ಪ್ರತಿವಾದಿಯ ಗಂಡ ನಾನು ಎಂದರೆ ಸರಿ. ನನಗೆ ಮತ್ತು 2 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿಯ ಕುಟುಂಬಕ್ಕೆ ಸಂಬಂಧ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ಸದರಿ ಲಕ್ಷ್ಮಯ್ಯ ಬಾಗಲೂರಿಗೆ ಬಂದಾಗ ಅವರಿಗೆ ಯಾವುದೇ ಜಮೀನು ಇಲ್ಲದ ಕಾರಣ ಬೇರೆಯವರ ಜಮೀನನ್ನು ಉಳುಮೆ ಮಾಡಿ ಸಂಪಾದನೆ ಮಾಡುತ್ತಿದ್ದರು ಎಂದರೆ ಸರಿ. ಸದರಿ ಜಮೀನಿನಿಂದ ಬಂದ ಆದಾಯದಲ್ಲಿ ಅವರು ದಾವಾ ಸ್ವತ್ತನ್ನು ಖರೀದಿಸಿದರು ಎಂದರೆ ಲಕ್ಷ್ಮಯ್ಯ ಮತ್ತು ನಾಗಪ್ಪ ಇಬ್ಬರೂ ಸೇರಿ ಖರೀದಿಸಿರುತ್ತಾರೆ ಎಂದು ನುಡಿಯುತ್ತೇನೆ. ಹಾಗೆ ಖರೀದಿಸುವಾಗ ನಾನು ಜನಿಸಿರಲಿಲ್ಲ. ಅವರು ಇಬ್ಬರೂ ಸೇರಿ ಖರೀದಿಸಿರುತ್ತಾರೆ ಎಂದು ನನಗೆ ನಮ್ಮ ತಾಯಿ ಹಾಗೂ ಲಕ್ಷ್ಮಯ್ಯ ಇಬ್ಬರೂ ಹೇಳಿರುತ್ತಾರೆ. ಸದರಿ ಇಬ್ಬರೂ ಸೇರಿ ದಾವಾ ಸ್ವತ್ತುಗಳನ್ನು ಖರೀದಿಸಿದ್ದರು ಎಂದು ತೋರಿಸಲು ದಾಖಲೆಗಳು ಇವೆಯೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಯ್ಯ ಮತ್ತು ನಾಗಪ್ಪ ಒಟ್ಟು ಕುಟುಂಬದಲ್ಲಿ ಇದ್ದರು ಎಂದು ತೋರಿಸಲು ದಾಖಲೆಗಳು ಇರಲಿಲ್ಲ ಎಂದರೆ ಸರಿ. ನಾನು ಆ ಬಗ್ಗೆ ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ಅವರಿಬ್ಬರೂ

ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದಾರೆ ಎಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿದ್ದಾರೋ ಎಂದು ನನಗೆ ಗೊತ್ತಿಲ್ಲ. ಸದರಿ ವಿಭಾಗ ಸುಮಾರು 2000 ನೇ ಇಸವಿಯಲ್ಲಿ ಆಗಿರುತ್ತದೆ. ಆ ಬಗ್ಗೆ ನಾನು ದಾಖಲೆಯನ್ನು ನೋಡಿರುವುದಿಲ್ಲ. ಸದರಿ ವಿಭಾಗದಲ್ಲಿ ಯಾವ ಆಸ್ತಿ ಯಾರಿಗೆ ಹೋಯಿತು ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಯ್ಯ ಅವರ ಹೆಣ್ಣು ಮಕ್ಕಳ ಮದುವೆ ಯಾವಾಗ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಲಕ್ಷ್ಮಯ್ಯ ಅವರ ಹೆಣ್ಣು ಮಕ್ಕಳು ಮದುವೆಯಾದ ನಂತರ ಅವರವರ ಗಂಡನ ಮನೆಗಳಲ್ಲಿ ವಾಸವಿರುತ್ತಾರೆ ಎಂದರೆ ಸರಿ. ನಾನು ಮತ್ತು 7 ನೇ ಪ್ರತಿವಾದಿ ನಮ್ಮ ಮನೆಯಲ್ಲಿ ವಾಸವಿದ್ದು, ಲಕ್ಷ್ಮಯ್ಯ ಮತ್ತು ನಾಗಪ್ಪ ಅವರ ಕುಟುಂಬದವರ ಮನೆಗಳಿಗೆ ಹೋಗಿ ಬರುವುದು ಮಾತ್ರ ಮಾಡುತ್ತೇವೆ. ನಾಗಪ್ಪ ಅವರು ಅವರ ಮನೆಯನ್ನು ನಾನು ಚಿಕ್ಕ ಹುಡುಗ ಇದ್ದಾಗ ಕಟ್ಟಿರುತ್ತಾರೆ. ಆಗ ನನಗೆ ಸುಮಾರು 4-5 ವರ್ಷ ವಯಸ್ಸು ಆಗಿರಬಹುದು ಎಂದರೆ ಸರಿ. ಸದರಿ ಮನೆ ಕಟ್ಟಿದ ನಂತರ ನಾಗಪ್ಪ ಅವರು ಅವರ ಹೆಂಡತಿ ಮಕ್ಕಳೊಂದಿಗೆ ಸದರಿ ಮನೆಯಲ್ಲಿ ವಾವಿಸದ್ದರು ಎಂದರೆ ಎಲ್ಲರೂ ಒಟ್ಟು ಕುಟುಂಬದಲ್ಲಿ ಇದ್ದರು ಎಂದು ನುಡಿಯುತ್ತೇನೆ. ಅವರು ಒಟ್ಟು ಕುಟುಂಬದಲ್ಲಿ ವಾಸವಿದ್ದರು ಎಂದು ತೋರಿಸಲು ದಾಖಲೆಗಳು ಇಲ್ಲ. ಲಕ್ಷ್ಮಯ್ಯ ಮತ್ತು ನಾಗಪ್ಪ ಅವರು ಒಟ್ಟು ಕುಟುಂಬದಲ್ಲಿ ಯಾವತ್ತೂ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಇಬ್ಬರ ಕುಟುಂಬದವರು ದಾವಾಸ್ವತ್ತುಗಳ ಜಂಟಿ ಸ್ವಾಧೀನದಲ್ಲಿ ಇದ್ದರು ಎಂದು ತೋರಿಸಲು ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಸುಮಾರು 1999-2000 ನೇ ಇಸವಿಯಲ್ಲಿ ಲಕ್ಷ್ಮಯ್ಯ ಅವರು ವಿಭಾಗ ಮಾಡಿಕೊಳ್ಳಿ ಎಂದು ಹೇಳಿದಾಗ ಸದರಿ ಎರಡೂ ಕುಟುಂಬಗಳಲ್ಲಿ ಮಾನಸ್ತಾಪ ಬಂತು. ನಾಗಪ್ಪನ ಹೆಸರಿಗೆ ಎಷ್ಟು ಆಸ್ತಿಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳಿಗೆ ಮತ್ತು ನನಗೂ ಮನಸ್ತಾಪ ಇರುವುದರಿಂದ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಕುಟುಂಬಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ - ಇಲ್ಲಾ.**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ.ಕೇ.ಸ.ಇ. ಎಂದು ಒಪ್ಪಿಕೊಂಡಿರುತ್ತಾರೆ,

Sd/-
**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ.,**
**ದೇವನಹಳ್ಳಿ.**